Ex. No.11/2014

ಪಿ.ಡಬ್ಲ್ಯೂ-1

**ದಿಃ 15.09.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

ಆದೇಶ 23 ನಿಯಮ 3 ಸಿ ಪಿ ಸಿ ಅಡಿಯಲ್ಲಿ ಸಲ್ಲಿಸಿದ ಮಧ್ಯಕಾಲಿಕ ಅರ್ಜಿ 1 ರ ಮೇಲಿನ ವಿಚಾರಣೆ

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಬಿ ಹೆಚ್ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ ಮತ್ತು ಪ್ರಮಾಣಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಡಬ್ಲ್ಯೂ ಪಿ ನಂಬರ 100178/2021 ರ ಆರ್ಡರ ಶೀಟ್ ಮತ್ತು ಆದೇಶದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 1 ಎಂದು ಗುರುತಿಸಲಾಯಿತು. ನನ್ನ ಮತ್ತು ನನ್ನ ತಾಯಿ ಹಾಗೂ ನನ್ನ ಸಹೋದರಿಯರ ಚುನಾವಣಾ ಗುರುತಿನ ಚೀಟಿಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ನಿ ಪಿ 2 ಎಂದು, ನನ್ನ ಅಕ್ಕ ಅಶ್ವಿನಿ ಎನ್ ಮತ್ತು ನನ್ನ ತಾಯಿ ರತ್ನಮ್ಮಳ ಆಧಾರ ಕಾರ್ಡನ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 3 ಎಂದು, ನನ್ನ ನನ್ನ ಮತ್ತೊಬ್ಬ ತಂಗಿ ಅಮೃತ ವರ್ಷಿಣಿ ಎನ್ ನಂಜನಗೌಡರ ರವರ ಆಧಾರ ಕಾರ್ಡನ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 4 ಎಂದು, ನನ್ನ ತಾಯಿಯ ಮದುವೆಯ ಲಗ್ನ ಪತ್ರಿಕೆಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 5 ಎಂದು, ಡಿ ಹೆಚ್ ಆರ್ 1 (ಸಿ) ರವರ ಅಶೋಕ ರವರ ಮದುವೆಯ ಲಗ್ನ ಪತ್ರಿಕೆಯನ್ನು ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 6 ಎಂದು, ಮೃತ ಡಿ ಹೆಚ್ ಆರ್ ನಾಗೇಂದ್ರಪ್ಪ ರವರ ಮನೆಯ ಗೃಹ ಪ್ರವೇಶದ ಪತ್ರಿಕೆಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 7 ಎಂದು, ನನ್ನ ಅಕ್ಕ ಅಶ್ವಿನಿ ನಂಜನಗೌಡರ ರವರ ಶಾಲೆಯ ವ್ಯಾಸಂಗ ಪ್ರಮಾಣ ಪತ್ರದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 8 ಎಂದು, ನನ್ನ ವ್ಯಾಸಂಗ ಪ್ರಮಾಣ ಪತ್ರದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 9 ಎಂದು, ನನ್ನ ತಂಗಿ ಅಮೃತ ವರ್ಷಿಣಿ ರವರ ವ್ಯಾಸಂಗ ಪ್ರಮಾಣ ಪತ್ರದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 10 ಎಂದು, ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆ ರವರು ಕೊಟ್ಟ

Ex. No.11/2014

ಪಿ.ಡಬ್ಲ್ಯೂ-1

ಫಲಾನುಭವಿಗಳ ಗುರುತಿನ ಚೀಟಿಯನ್ನು ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 11 ಮತ್ತು 12 ಎಂದು, ನನ್ನ ಮತ್ತು ನನ್ನ ಅಕ್ಕತಂಗಿಯರ ನನ್ನ ತಂದೆ ತಾಯಿಯರ ಹಾಗೂ ಡಿ ಹೆಚ್ ಆರ್ 1(ಸಿ) ರವರುಗಳು ಒಟ್ಟಿಗೆ ಇದ್ದ ತೆಗೆಸಿದ 18 ಪೋಟೋಗಳ ದೃಢಿಕೃತ ನಕಲುಗಳನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 13 ಎಂದು, ಓ ಎಸ್ ನಂಬರ 15/2013 ರಲ್ಲಿ ನನ್ನ ತಂದೆ ನಾಗೇಂದ್ರಪ್ಪನವರ ಸಲ್ಲಿಸಿದ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಮತ್ತು ಸಾಕ್ಷ್ಯ ಹೇಳಿಕೆಯ ದೃಢಿಕೃತ ನಕಲುಗಳನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 14 ಎಂದು ಗುರುತಿಸಲಾಯಿತು.

**(ಡಿ ಹೆಚ್ ಆರ್ ನಂಬರ 1 (ಎ) ಮತ್ತು 1 (ಸಿ) ರವರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.